ಬಿಡುಗಡೆಯಾಗಿರುವ ಒಟ್ಟು ಮೊತ್ತ ಸುಮಾರು 160 ಕೋಟಿ ರೂ ಗಳು ಮಾತ್ರ. ಭಾರತ ಸರ್ಕಾರದಿಂದ ಹಣ ಬಿಡುಗಡೆಯಾಗುವಲ್ಲಿ ಉಂಟಾಗಿರುವ ವಿಳಂಬದಿಂದಾಗಿ ಗುತ್ತಿಗೆದಾರರಿಗೆ ಸಕಾಲದಲ್ಲಿ ಹಣವನ್ನು ಪಾವತಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಾಧ್ಯವಾಗುತ್ತಿಲ್ಲ ಇದೂ ಸಹ ಕಾಮಗಾರಿಗಳ ನಿರ್ವಹಣೆಯಲ್ಲಿನ ವಿಳಂಬಕ್ಕೆ ಮುಖ್ಯ ಕಾರಣವಾಗಿರುತ್ತದೆ.

ಪ್ರಶ್ನೆ ಸಂಖ್ಯೆ 81 (191) ಶ್ರೀ ಸಿದ್ದು ಸಾವದಿ (ಜಮಖಂಡಿ)

ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ತಾಲ್ಲೂಕಿನ ಜಂಬಗಿ ಬಿ ಕೆ ಗ್ರಾಮದ ಮುಂದೆ ಕೃಷ್ಣಾ ನದಿಗೆ ಸೇತುವೆ ನಿರ್ಮಿಸುವ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ, ಯಾವಾಗ ಮಂಜೂರಾತಿ ಕೊಟ್ಟು ಕೆಲಸವನ್ನು ಪ್ರಾರಂಭಿಸಲಾಗುವುದು,

ಇ) ಈ ಸೇತುವೆ ತಾಲ್ಲೂಕಿನ ಸಂಪರ್ಕ ದೃಷ್ಟಿಯಿಂದ ಬಹಳ ಅವಶ್ಯವಿದ್ದು, ಪ್ರತಿ ವರ್ಷ ಬರುವ ಮಹಾಪೂರದಿಂದ ಜಮಖಂಡಿ ನಗರವನ್ನು ನಡುಗಡ್ಡೆ ಆಗುವುದನ್ನು ತಪ್ಪಿಸುವ ದೃಷ್ಟಿಯಿಂದ ತುರ್ತಾಗಿ ಅಂದರೆ ಇದೇ ವರ್ಷದಲ್ಲಿ ಈ ಕಾರ್ಯವನ್ನು ಕೈಗೊಳ್ಳಲಾಗುವುದು?

ಹೆಚ್ ಡಿ ರೇವಣ್ಣ

ಅ) ಬಂದಿದೆ

ಆ) ಈ ಸೇತುವೆಯ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಯ ಆಧಾರದ ಮೇಲೆ ಕೈಗೊಳ್ಳಲು ಬಗ್ಗೆ ಪರಿಗಣಿಸಲಾಗುವುದು

ಪ್ರಶ್ನೆ ಸಂಖ್ಯೆ 82 (192) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ಉತ್ತರ ಕರ್ನಾಟಕದ ನಗರಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ದೃಷ್ಟಿಯಿಂದ ಈಗಾಗಲೇ ಮಂಜೂರು ಮಾಡಿದ ಎಡಿಬಿ ಯೋಜನೆಯ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು,

2 ಇದುವರೆಗೆ ಈ ಕಾರ್ಯವನ್ನು ಪ್ರಾರಂಭಿಸದೆ ಇರುವ ಕಾರಣಗಳೇನು,

3 ವೇಗವಾಗಿ ಬೆಳೆಯುತ್ತಿರುವ ನಗರಗಳ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಯುಜಿಡಿ ಡ್ರೈನೇಜು ಶೌಚಾಲಯ ರಸ್ತೆ ವಿದ್ಯುತ್ ದೀಪ ಈ ರೀತಿ ಅನೇಕ ಸಮಸ್ಯೆಗಳ ಅಭಿವೃದ್ಧಿಗೆ ಎಡಿಬಿಯಲ್ಲಿ ಮಂಜೂರಾದ ಹಣ ಕಡಿಮೆಯಾಗಿದ್ದು, ಅದನ್ನು ಹೆಚ್ಚಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ

1) ಏಷಿಯನ್ ಅಭಿವೃದ್ಧಿ ಬ್ಯಾಂಕ್ ಡಿಸೆಂಬರ್ 2006 ಜನವರಿ 2007ರಲ್ಲಿ ಕಾರ್ಯಕ್ರಮಕ್ಕೆ ಅನುಮೋದನೆ ನೀಡಿರುತ್ತದೆ

ಕಾರ್ಯಕ್ರಮ ಸಮಾಲೋಚಕರ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಯೋಜನೆಗೆ ಅಗತ್ಯವಾದ ಭೂಸ್ವಾಧೀನಪಡಿಸಿಕೊಂಡ ನಂತರ ಕಾಮಗಾರಿಗಳನ್ನು ಪ್ರಾಂಭಿಸಲಾಗುವುದು

2) ಸಮಾಲೋಚಕರನ್ನು ಆಗಸ್ಟ್ 2007ರಲ್ಲಿ ನೇಮಕಗೊಳಿಸುವ ಸಾಧ್ಯತೆಯಿದ್ದು, ಸಮಾಲೋಲಕರ ನೇಮಕಾತಿ ಹಾಗೂ ಭೂಸ್ವಾಧೀನ ಪಡಿಸಿಕೊಂಡ ನಂತರ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ವಿಳಂಬವಾಗಿದೆ

3) ಯೋಜನಾ ವರದಿಯನ್ನು ಆಧರಿಸಿ ಹಣದ ಹಂಚಿಕೆ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಇದಕ್ಕೆ ಎಡಿಬಿಯು ಅನುಮೋದನೆ ನೀಡಿರುತ್ತದೆ, ಯೋಜನಾ ಗಾತ್ರ ಹೆಚ್ಚಿಸುವ ಬಗ್ಗೆ ಯಾವುದೇ ಪ್ರಸ್ತಾಪ ಇರುವುದಿಲ್ಲ

ಪ್ರಶ್ನೆ ಸಂಖ್ಯೆ 83 (193) ಶ್ರೀ ಸಿದ್ದು ಸಾವದಿ (ಜಮಖಂಡಿ)